ವಿಸ್ತರಣೆ ಮಾಡಬೇಕು ಎನ್ನುವ ಉದ್ದೇಶಕ್ಕಾಗಿ, ಇದರ ಪ್ರಸ್ತಾವನೆ ನಡೆಯುತ್ತಾ ಇತ್ತು . ಅದು ಮಧ್ಯದಲ್ಲಿ ನಿಂತುಹೋಯಿತು. ದಯವಿಟ್ಟು ಈ ಜಮೀನನ್ನು ಸ್ವಾಧೀನ ಮಾಡಿಕೊಂಡು ವಿಕ್ಟೋರಿಯ ಆಸ್ಪತ್ರೆ ವಿಸ್ತರಣೆ ಮಾಡಲೇ ಬೇಕು, ಇದು ಬಹಳ ಚಿಕ್ಕದಾಗಿದೆ. ಇವತ್ತು ಜನಸಂಖ್ಯೆ ಜಾಸ್ತಿಯಾಗಿ ಹಳ್ಳಿಗಳಿಂದ ಹೋರ ರೋಗಿಗಳು ಬರುತ್ತಿದ್ದಾರೆ . ಒಳರೋಗಿಗಳಿಲ್ಲಾ ಆಚೆ ಕೆಳಗಡೆ ಮಲಗುತ್ತಿದ್ದಾರೆ. ಅವರಿಗೆ ಕೊಠಡಿಗಳು ಇಲ್ಲ, ಹಾಸಿಗೆಗಳು ಇಲ್ಲ. ಆ ದೃಷ್ಟಿಯಿಂದಲಾದರೂ ಅದನ್ನು ಸ್ವಾಧೀನಮಾಡಿಕೊಂಡು ವಿಸ್ತರಣೆ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ರಾಮಕೃಷ್ಣ : ಆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳತಕ್ಕಂತಹ ಕ್ರಮವನ್ನು ನಾವು ಯಾವತ್ತೂ ತೆಗೆದುಕೊಂಡಿಲ್ಲ. ತಾವು ಅದನ್ನು ಸ್ವಾಧೀನ ಪಡಿಸಿಕೊಳ್ಳುವುದು ಸೂಕ್ತ ಇದೆ ಎಂದರೆ ಅದರ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಎಸ್. ರಮೇಶ್ : ಹಿಂದೆ ಒಂದು ಸಮಯದಲ್ಲಿ ಅದನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಎಂದು ಹೇಳಿದ್ದರು. ಆ ವಿಚಾರವಾಗಿ ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕೇಳಿದ್ದೆ. ಕಾರ್ಮಿಕ ನಗರವಾದಂಥ ಬೆಂಗಳೂರಿನಲ್ಲಿ ಇದು ದೊಡ್ಡ ಆಸ್ಪತ್ರೆಯೆಂದು ಹೇಳುತ್ತಾರೆ, ಆದರೆ ರೋಗಿಗಳನ್ನು ಕೆಳಗಡೆ ಮಲಗಿಸುತ್ತಿದ್ದಾರೆ. ಇನ್ನು ಸ್ವಾಧೀನ ಪಡಿಸಿ ಕೊಳ್ಳುತ್ತೇವೆ ಎಂದರೆ ಎಷ್ಟು ದಿವಸದಲ್ಲಿ ಸ್ವಾಧೀನ ಪಡಿಸಿಕೊಳ್ಳುತೀರಿ ಎಂದು ಹೇಳಿ. ಪರಿಶೀಲಿಸುತ್ತೇವೆ, ನೋಡುತ್ತೇವೆ, ಮಾಡುತ್ತೇವೆ ಎಂದು ಹೇಳಿದರೆ ಹೇಗೆ? ನೀವು ಯಾವಗಲಾದರೂ ಮೇಜರ್ ಆಕ್ಸಿಡೆಂಟ್ಸ್ ಆದಾಗ ದಯವಿಟ್ಟು ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ಕೊಟ್ಟು ನೋಡಿ. ಡೆಡ್ ಬಾಡಿಯಿಂದ ಹಿಡಿದು ಪೇಷಂಟ್‌ವರೆಗೂ ಹೇಗೆ ಇಟ್ಟಿರುತ್ತಾರೆ ಎಂದು ತಿಳಿಯುತ್ತದೆ. ದಯವಿಟ್ಟು ಈ ವಿಚಾರವನ್ನು ಪರಿಶೀಲಿಸಿ ಎಂದು ಹೇಳುತ್ತೇನೆ.

ಶ್ರೀ ಜಿ. ರಾಮಕೃಷ್ಣ: ಈಗಾಗಲೇ ಹೇಳಿದ್ದೇನೆ, ಆ ಜಮೀನು ನಮಗೆ ಬಹಳ ಅವಶ್ಯಕತೆ ಇದ್ದು ತೆಗೆದುಕೊಳ್ಳಬೇಕು ಎಂದು ಮನದಟ್ಟು ಆದರೆ ಅದನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ.

ವಿಷಯ : ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹೆಚ್ಚುವರಿ ಪ್ರವೇಶ.

434

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1991-92 ಹಾಗೂ 1992-93ನೇ ಸಾಲುಗಳಲ್ಲಿ ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರ ನಿಗಧಿ ಮಾಡಿದ ಸಂಖ್ಯೆಗಿಂತ ಹೆಚ್ಚುವರಿ ಪ್ರವೇಶವನ್ನು ಪ್ರಥಮ ಎಂ.ಬಿ.ಬಿ.ಎಸ್‌ನಲ್ಲಿ ಯಾರಾದರೂ ಮಾಡಿರುವರೇ?
2. ಈ ಪ್ರವೇಶವನ್ನು ಮಾಡುವಾಗ ವಿಶ್ವ ವಿದ್ಯಾನಿಲಯಗಳು ಮತ್ತು ಸರ್ಕಾರದವರು ಒಪ್ಪಿಗೆ ಕೊಟ್ಟಿರುವರೇ?
3. ಹೀಗೆ ಪ್ರವೇಶ ಮಾಡಿದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಸರ್ಕಾರ ಅನುಮತಿ ನೀಡಿರುವುದೇ?

ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು) :

1. ಹೌದು.

1. ಎಂ.ಆರ್.ಎಂ.ಸಿ. ಗುಲ್ಬರ್ಗಾ -34 ಸೀಟುಗಳು - 1991-92ನೇ ಸಾಲಿಗೆ
2. ಶ್ರೀ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳ್ಳೂರು - 7 ಸೀಟುಗಳು - 1991-92ನೇ ಸಾಲಿಗೆ

1. ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು - 8 ಸೀಟುಗಳು - 1992-93ನೇ ಸಾಲಿಗೆ
2. ಜೆಎನ್ಎಂಸಿ, ಬೆಳಗಾಂ - 2 ಸೀಟುಗಳು -1992-93ನೇ ಸಾಲಿಗೆ

2. ಇಲ್ಲ

3. ಎಂ.ಆರ್.ಎಂ.ಸಿ. ಗುಲ್ಬರ್ಗಾ ಮತ್ತು ಶ್ರೀ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳ್ಳೂರು ಇಲ್ಲಿ 1991-92ನೇ ಸಾಲಿನಲ್ಲಿ ಹೆಚ್ಚುವರಿ ಪ್ರವೇಶ ಮಾಡಿರುವ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಲು ಮಾತ್ರ ಸಂಬಂಧಿಸಿದ ವಿಶ್ವವಿದ್ಯಾನಿಲಯಕ್ಕೆ ಸೂಚಿಸಲಾಗಿದೆ. ಆದರೆ, ಹೆಚ್ಚುವರಿ ಪ್ರವೇಶಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, 1992-93ರ ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದರೆ ಅದೇ ವರ್ಷದ ಮ್ಯಾನೇಜ್‌ಮೆಂಟ್ ಖೋಟಾ ಇಷ್ಟೊಂದು ಸೀಟನ್ನು ಏಕೆ ಕಡಿಮೆ ಮಾಡಲಿಲ್ಲ. ಇದು ನನ್ನ ಮೊದಲನೆಯ ಪ್ರಶ್ನೆ. ನೀವು ಐಎಂಸಿಯವರು ಈಗ ಈ ಕಾಲೇಜನ್ನು ಡಿರೆಕಗ್ನೈಸ್ ಮಾಡಿದರೆ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳಿಗೆ ತೊಂದರೆ ಆಗುವುದಿಲ್ಲವೇ ಇದು ಎರಡನೆಯ ಪ್ರಶ್ನೆ. ಮತ್ತು ನೀವು ಯಾವ ಕಾನೂನಿನ ಅಡಿಯಲ್ಲಿ ಆದೇಶ ಕೊಟ್ಟಿದ್ದೀರಿ? ಇದು ಮೂರನೆಯ ಪ್ರಶ್ನೆ. ಈಗ ನೀವು ಮ್ಯಾನೇಜ್‌ಮೆಂಟ್‌ಗೆ ಏನು ಶಿಕ್ಷೆ ಕೊಡುತ್ತೀರಿ?

ಶ್ರೀ ಜಿ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ಅವರ ಮೂಲ ಪ್ರಶ್ನೆ ಹೆಚ್ಚುವರಿ ಪ್ರವೇಶದ ಬಗ್ಗೆ ಇದೆ. 1991-92ನೇ ಸಾಲಿನಲ್ಲಿ ಎಂ.ಆರ್. ಮೆಡಿಕಲ್ ಕಾಲೇಜಿಗೆ ಮಾತ್ರ ಹೆಚ್ಚುವರಿ ಸೀಟು ಕೊಟ್ಟಿಲ್ಲ. ಯಾವ ಯಾವ ಆಸ್ಪತ್ರೆಗಳಲ್ಲಿ ಮೆಡಿಕಲ್ ಕಾಲೇಜುಗಳಲ್ಲಿ ಹೆಚ್ಚುವರಿ ಸೌಲಭ್ಯಗಳು ಇದೆಯೋ, ಅಲ್ಲೆಲ್ಲಾ ಹೆಚ್ಚು ಸೀಟುಗಳನ್ನು ಕೊಡುತ್ತಾ ಬಂದಿದ್ದೇವೆ. ಎಂ.ಆರ್.ಮೆಡಿಕಲ್ ಕಾಲೇಜು ಮತ್ತು ಆದಿಚುಂಚನಗಿರಿ ಕಾಲೇಜುಗಳಲ್ಲಿ ಹೆಚ್ಚುವರಿ ಸೀಟುಗಳ ಅಡ್‌ಮಿಷನ್ ಆದ ಮೇಲೆ ನಮಗೆ ವರದಿ ಸಲ್ಲಿಸಿದರು. 1991-92ರ ನಂತರ ಕೇಂದ್ರ ಸರ್ಕಾರದಿಂದ ಆರ್ಡಿನೆನ್ಸ್ ಬರುವುದಕ್ಕೆ ಮುಂಚೆಯೇ ಬಹಳಷ್ಟು ಕಾಲೇಜುಗಳಿಗೆ ಈ ರೀತಿ ಸೀಟುಗಳನ್ನು ಕೊಟ್ಟಿದ್ದೇವೆ. ಅವರು ಆರೋಗ್ಯ ಮಂತ್ರಿಗಳಾಗಿದ್ದಾಗ ಕೂಡ ಬಹಳಷ್ಟು ಆಗಿವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಯಾರ ಸರ್ಕಾರದಲ್ಲಿ ಎಷ್ಟು ಆಗಿವೆ ಎಂದು ಪ್ರಶ್ನೆ ಕೇಳಿಲ್ಲ. ಈಗ ನೀವು ಏನು ಮಾಡಿದ್ದೀರಿ ಅದು ಹೇಳಿ. 50 ಸೀಟು

ಹೆಚ್ಚುವರಿ ಮಾಡಿದ್ದೀರಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಿಮ್ಮ ಕಾಲದಲ್ಲಿ ಏನಾಗಿದೆ, ಅದೆಲ್ಲಾ ನಮಗೆ ಬೇಕಾಗಿಲ್ಲ. ಈಗ 1991-92ರಲ್ಲಿ ಅಡ್‌ಮಿಷನ್ ಎಕ್ಸ್‌ಟ್ರಾ ಆಗಿದ್ದು ನಿಮ್ಮ ಗಮನಕ್ಕೆ ಬಂದಿದ್ದರೆ 1992-93ನೇ ಸಾಲಿನಲ್ಲಿ ಏಕೆ ಕಡಿಮೆ ಮಾಡಲಿಲ್ಲ. ಎರಡನೆಯದಾಗಿ, ನಾಳೆ ಪರೀಕ್ಷೆ ಎನ್ನುವಾಗ, ರಾತ್ರಿ ಫೋನ್ ಮಾಡಿ ಯಾವ ಆಕ್ಸ್‌ನ ಯಾವ ಪ್ರಾವಿಜನ್ ಮೇಲೆ ಎಗ್ಸಾಮಿನೇಷನ್‌ಗೆ ಕೂರಿಸುತ್ತೀರಿ? ಆ ಕಾಲೇಜನ್ನು ಐ.ಎಂ.ಸಿ. ಡೀರೆಕಗ್‌ನೈಜ್ ಮಾಡಿದರೆ ನೀವು ಏನು ಮಾಡುತ್ತೀರಿ? ಈ ಮೂರು ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಆದರೆ ಕೊಡಿ, ಕೊಡಲಾಗದಿದ್ದರೆ ಉತ್ತರ ಇಲ್ಲ ಎಂದು ಹೇಳಿ. He must know his limits. ವಿರೋಧ ಪಕ್ಷದವರು ಇವರು ಹೇಳಿದ್ದನ್ನು ಕೇಳಿಕೊಂಡು ಹೋಗುವುದಕ್ಕೆ ಬಂದಿಲ್ಲ. I am very sorry. He cannot ask me what you have done. I know what I have done. You must be ashamed of it. I became the Health Minister during 1983; at that time these people had given 120 seats to M.S. Ramaiah College. Those boys were on the street.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಕೇಳುವುದು ಒಂದು, ಉತ್ತರ ಕೊಡುವುದು ಬೇರೆ. ಉತ್ತರವನ್ನು ನೇರವಾಗಿ ಸ್ಪಷ್ಟವಾಗಿ ಕೊಡಿ.

(INTERRUPTIONS)

SRI P. G. R. SINDHYA: He has no moral right to talk like that. I am very sorry. He cannot say, what you have done .

(INTERRUPTIONS)

ಅಧ್ಯಕ್ಷರು : ಕುಳಿತುಕೊಳ್ಳಿ, ಅವರು ಹೇಳುವುದನ್ನು ಕೇಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಕೊಡುವುದು ನಮ್ಮ ಕರ್ತವ್ಯ. ನಾವು ಉತ್ತರ ಕೊಟ್ಟ ಮೇಲೆ ಅವರಿಗೆ ಸಮಾಧಾನ ಇಲ್ಲದಿದ್ದರೆ ನಂತರ ಎದ್ದು ನಿಂತು ಕೇಳಬೇಕು. ಅದು ಬಿಟ್ಟು ಹೀಗೆ ನಾಲ್ಕು ಜನ ಒಟ್ಟಿಗೆ ನಿಂತುಕೊಂಡರೆ ಹೇಗೆ?

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ , ನಾನು ಕೇಳಿದಂತಹ ಮೂರು ಸ್ಪೆಸಿಫಿಕ್ ಪ್ರಶ್ನೆಗಳಿಗೆ ಉತ್ತರ ಇಲ್ಲದೆ ಹೋದರೆ ಇಲ್ಲ ಎಂದು ಹೇಳಿ. Because it reflects on my personality , is it not so? It reflects on my individual leadership. If there is anything fishy during my tenure, let the files come

out.

ಶ್ರೀ ಜಿ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ಎಲ್ಲಾ ಮೆಡಿಕಲ್ ಕಾಲೇಜುಗಳೂ ಸಹಿತ ಸ್ವಾಭಾವಿಕವಾಗಿ ಹುಡುಗರ ಇಂಟರೆಸ್ಟ್‌ನಿಂದ ಅಲ್ಲಿನ ಸಮಸ್ಯೆಗಳ ಬಗ್ಗೆ ವಿಚಾರ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತಾ ಬಂದಿವೆ. ಮೊದಲನೆಯ ಸಲ ತೆಗೆದುಕೊಂಡಿದ್ದು ಅಲ್ಲ. ಅದು ಆಗಬಾರದು ಆಗಿದೆ ಎನ್ನುವ ಮಾತು ಇದರಲ್ಲಿ ಇಲ್ಲ. ಇದು 91-92ರಲ್ಲಿ ಕೇಂದ್ರ ಸರ್ಕಾರ ಆರ್ಡಿನೆನ್ಸ್ ಬರುವುದಕ್ಕೆ ಮುಂಚಿತವಾಗಿ , ಆಗ ಅಷ್ಟೊಂದು ಕಠಿಣವಾದಂತ ಕ್ರಮ ತೆಗೆದುಕೊಳ್ಳಬಾರದು ಎನ್ನತಕ್ಕ ಕಟ್ಟಳೆ ಏನೂ ಇರಲಿಲ್ಲ. ಆಗಿನಿಂದಲೂ ತೆಗೆದುಕೊಂಡು ಬಂದಿದ್ದಾರೆ. ಈಗ 92-93ರಲ್ಲಿ ನಾವು ಪರ್ಮಿಷನ್ ಕೊಡುವುದಕ್ಕೆ ಮೊದಲು ತೆಗೆದುಕೊಂಡವರಿಗೆ ಸ್ವಾಭಾವಿಕವಾಗಿ ಹಿಂದೆ ಕೊಟ್ಟ ಹಾಗೆ ಕೊಡಬೇಕಾಗಿತ್ತು. ಇದನ್ನು ಕೊಡದೇ ನಿಂತಿದ್ದಕ್ಕೆ ಇವತ್ತು ಈ ಕೊಶ್ಚನ್ ಉದ್ಭವವಾಗಿದೆ ಇದನ್ನು ನಾವು ಒಪ್ಪಿಕೊಳ್ಳ ಬೇಕಾಗುತ್ತದೆ. ಈಗಾಗಲೇ ಹುಡುಗರು ಅಡ್ಮಿಷನ್ ತೆಗೆದು ಕೊಂಡಿದ್ದಾರೆ, ಹುಡುಗರ ಇಂಟರೆಸ್ಟ್ ನಲ್ಲಿ ಅವರಿಗೆ ಪರೀಕ್ಷೆ ಕೂಡಲಿಕ್ಕೆ ಅನುಮತಿ ಕೊಟ್ಟಿದ್ದೇವೆ. ಈಗ ಯಾರು ಎಕ್ಸ್ಸ್ ತೆಗೆದುಕೊಂಡಿದ್ದಾರೆ ಅವರಿಗೆ ಪರೀಕ್ಷೆ ಆದ ನಂತರ ಕ್ಲಿಯರೆನ್ಸ್ ಸಿಗುವವರೆಗೆ ರಿಸಲ್ಟ್ ಹೆಲ್ಡ್ ಅಪ್ ಮಾಡಬೇಕು ಎನ್ನತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿದ್ದೇವೆ, ಅದರಂತೆ ಆದೇಶ ಕೊಟ್ಟಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಮಂತ್ರಿಗಳು ನನ್ನ ಉಪ ಪ್ರಶ್ನೆಗಳಿಗೆ ಏನು ಉತ್ತರ ಕೊಟ್ಟಿದ್ದಾರೆ ಅದು ಸಂಬಂಧಪಟ್ಟ ಉತ್ತರ ಅಲ್ಲ. ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಏಕೆಂದರೆ ಇದು ಪ್ರಶ್ನೋತ್ತರ ಸಮಯ ಎನ್ನತಕ್ಕ ಪ್ರಶ್ನೆ ನನಗೂ ಇದೆ. ಈ ಸದನದ ಸಮಯವನ್ನು ನಾನು ಹಾಳು ಮಾಡುವುದಕ್ಕೆ ತಯಾರಿಲ್ಲ. ಮಾನ್ಯ ಮಂತ್ರಿಗಳು ಹೊಸದಾಗಿ ಬಂದಿದ್ದಾರೆ. ಈ ತಪ್ಪನ್ನು ಅವರು ಮಾಡಿದ್ದಾರೆ ಎಂದು ನಾನು ಅಪಾದನೆ ಮಾಡುತ್ತಿಲ್ಲ. ಯಾರೋ ಮಾಡಿರತಕ್ಕಂಥ ತಪ್ಪನ್ನು ನೀವು ಏಕೆ ಹೊರುತ್ತೀರಿ? ಕೊನೆಯಪಕ್ಷ ತಪ್ಪಾಗಿದೆ ಎಂದು ಹೇಳಿ. They have no powers. The Government has no powers under the University Act to give directions to the University to allow them for examinations. This is the blunder the Government has committed. I allege that the Chief Minister for various considerations has telephoned . Why should he telephone? This is No.1, No.2, ಪ್ರಾವಿಷನ್‌ನಲ್ಲಿ ಇದೆ, ಒಂದು ವರ್ಷದಲ್ಲಿ ನೀವು ಹೇಳಿದ ಹಾಗೆ ಸಪೋಸ್ 91-92ರಲ್ಲಿ 5 ಜನ ಹುಡುಗರನ್ನು ಅಡ್ಮಿಟ್ ಮಾಡಿಕೊಳ್ಳುತ್ತಾರೆ. 92-93ರ ಮ್ಯಾನೇಜ್‌ಮೆಂಟ್ ಕೋಟದಲ್ಲಿ ನಿಮಗೆ ಕಡಿಮೆ ಮಾಡುವುದಕ್ಕೆ ಅವಕಾಶ ಇದೆ. ಏಕೆ ಮಾಡಲಿಲ್ಲ? Why you have not done it? Atleast, you do it now.

ಡಾ॥ ಜಿ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ನಾವು ಅದನ್ನು ರೆಕಗ್‌ನೈಸ್ ಮಾಡಿಲ್ಲ ನಾವು ಬರೀ ಎಗ್ಸಾಮ್‌ಗೆ ಅಪಿಯರ್ ಆಗಲಿಕ್ಕೆ ಮನ್ನಣೆ ಕೊಟ್ಟಿದ್ದೇವೆ. ಎಗ್ಸಾಮಿನೇಷನ್ ಆದ ನಂತರ ಅವರ ರಿಸಲ್ಟ್ ಹೆಲ್ಡ್ ಅಪ್ ಮಾಡುವುದಕ್ಕೆ ಹೇಳಿದ್ದೇವೆ. ತಾವು ಹೇಳಿದ ಪ್ರಕಾರ ನೆಕ್ಸ್ಟ್ ಇಯರ್‌ನಲ್ಲಿ ಎಕ್ಸೆಸ್ ಕೋಟ ಏನು ಇದೆ ಅದನ್ನು ಕಡಿಮೆ ಮಾಡಬೇಕೆಂದು ತಾವು ಏನು ಹೇಳಿದ್ದೀರಿ ಅದನ್ನು ನಾವು ಆಲೋಚನೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಕ್ಯಾಪಿಟೇಶನ್ ಪದ್ಧತಿಯಿಂದ ಹಣ, ಲೂಟಿ ಆಗುತ್ತಿದೆ. ಸ್ವಾಮಿ ಮಲೇಶಿಯಾ ವಿದ್ಯಾರ್ಥಿಗಳಿಗೆ 50 ಸೀಟ್ ಎಂ.ಎಸ್. ರಾಮಯ್ಯ ಕಾಲೇಜಿಗೆ ತಾವು ಕೊಟ್ಟಿದ್ದೀರಿ. 50 ಮಲೇಶಿಯ ವಿದ್ಯಾರ್ಥಿಗಳಿಂದ 5 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ವಾಟಾಳ್ ಅವರೇ ಕುಳಿತುಕೊಳ್ಳಿ.

<u>ವಿಷಯ : ಪ್ರತಿ ವೈದ್ಯಕೀಯ ಡೆಂಟಲ್ ಹಾಗೂ ಫಾರ್ಮಸಿ ವಿದ್ಯಾರ್ಥಿಗೆ ತಗಲುವ ವೆಚ್ಚ.</u>

427

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ಫಾರ್ಮಸಿ ಹಾಗೂ ಡೆಂಟಲ್ ಕಾಲೇಜುಗಳಲ್ಲಿ ಓದುತ್ತಿರುವ ಪ್ರತಿಯೊಂದೂ ವಿದ್ಯಾರ್ಥಿಗೆ ಆ ಕೋರ್ಸನ್ನು ಮುಗಿಸಲು ಎಷ್ಟು ಖರ್ಚು ಬರುವುದು?

ಆ) ಸರ್ಕಾರಿ ಕಾಲೇಜಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಯು ಆತನು ವಿದ್ಯಾಭ್ಯಾಸ ಮುಗಿಸಿದ ನಂತರ ಕಡ್ಡಾಯವಾಗಿ ಕೆಲವು ವರ್ಷ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಬೇಕೆಂದು ನಿಯಮವೇನಾದರೂ ಇದೆಯೇ?

ಇ) ಹಾಗಿಲ್ಲದಿದ್ದಲ್ಲಿ ಗ್ರಾಮೀಣ ಜನರ ಅನುಕೂಲತೆಗಾಗಿ ಕಡ್ಡಾಯವಾಗಿ ಸೇವೆ ಸಲ್ಲಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಎಂ.ಬಿ.ಬಿ.ಎಸ್ ಕೋರ್ಸ್ ಮುಗಿಸಲು ಪ್ರತಿ ವಿದ್ಯಾರ್ಥಿಗೆ ಅಂದಾಜು 2 ಲಕ್ಷ ರೂಪಾಯಿ ಖರ್ಚು ತಗಲುತ್ತದೆ. ಬಿ.ಡಿ.ಎಸ್. ಕೋರ್ಸ್ ಮುಗಿಸಲು ಪ್ರತಿ ವಿದ್ಯಾರ್ಥಿಗೆ ಅಂದಾಜು 1.60 ಲಕ್ಷ ರೂಪಾಯಿ ಖರ್ಚು ತಗಲುತ್ತದೆ. ಡಿ-ಫಾರ್ಮ ವಿದ್ಯಾರ್ಥಿಗೆ ರೂ.27,000 , ಬಿ-ಫಾರ್ಮ ವಿದ್ಯಾರ್ಥಿಗೆ ರೂ.54000, ಎಂ-ಫಾರ್ಮ ವಿದ್ಯಾರ್ಥಿಗೆ ರೂ.49,999 ಖರ್ಚು ತಗಲುತ್ತದೆ.

ಆ) ಇಲ್ಲ

ಇ) ಪರಿಶೀಲಿಸಲಾಗುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಒಬ್ಬ ವಿದ್ಯಾರ್ಥಿಗೆ ಅವನ ವಿದ್ಯಾಭ್ಯಾಸ ಮುಗಿಸಬೇಕಾದರೆ ಎಷ್ಟು ಖರ್ಚು ಬರುತ್ತದೆ ಎಂದು ಕೇಳಿದ್ದಕ್ಕೆ ಎಂ.ಬಿ.ಬಿ.ಎಸ್. ಗೆ ಎರಡು ಲಕ್ಷ ರೂಪಾಯಿ, ಡೆಂಟಲ್‌ಗೆ ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿ, ಎಂ- ಫಾರ್ಮಕ್ಕೆ ನಲವತ್ತೊಂಬತ್ತು ಸಾವಿರ ರೂಪಾಯಿ ಎಂದು ಹೇಳಿದ್ದೀರಿ. ನಾನು ಕೇಳುವುದು ಅವರಿಗೆ ಸರ್ಕಾರಿ ಕಾಲೇಜಿನಲ್ಲಿ ವಿಧ್ಯಾಭ್ಯಾಸ ಮುಗಿಸಿದ ನಂತರ ಒಂದು ವರ್ಷ, ಎರಡು ವರ್ಷ ಹಳ್ಳಿಗಳಿಗೆ ಹೋಗಿ ಕಡ್ಡಾಯವಾಗಿ ಸರ್ವೀಸ್